ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 8ನೇ ಆಗಸ್ಟ್ 1896.

ಮೈಸೂರ್ ಡಿಸ್ಟ್ರಿಕ್ಟ್‌ನಲ್ಲಿ ಇದರಡಿ ಕಂಡ ಫಾರೆಸ್ಟ್ಸುಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಡಿಪೋಗಳಿಗಾಗಲಿ ಯಾ-ತೆಪ್ಪದ ಕಾಡುಗಳಿಗಾಗಲಿ 1897ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ ಮೂರು ತಿಂಗಳಿಗೆ ವಂದಾವರ್ತಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಷ್ಕರ್ಷಿಸಲ್ಪಡಬಹುದಾದ ಮಾಹೆವಾರ್ ಹಸ್ತ, ಪೋಖ್ತಾ ಮತ್ತು ವಣ ನಾಟಾ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಡಿಪೋ ಹೆಸರು.	ನರಬರಾಯಿ ಮಾಡಬೇಕಾದ ಮೊತ್ತ.		
			ತೊಲೆ ಜಂತೆ.	ಮುಂಡಿಗೆಸರಾ.	ಬೊಂಬು.
			ನಲೆ ಅಡಿ.	ಗಾಡಿಗಳು.	ಗಾಡಿಗಳು.
ಗುಂಡ್ಲು ..	ಭಂಡೀಪುರ ..	ಮೈಸೂರು ವುಡ್ಯಾರ್ಡು			
	ಬೇರಂಬಾಡಿ ..	ಡಿಟೋ	ವಣಮರ		..
ಹೆಗ್ಗಡದೇವನಕೋಟೆ.	ಬೇಗೂರು ..	ಡಿಟೋ	22,000	100	..
	ಐನೂರು ಮಾರಿಗುಡಿ ..	ಡಿಟೋ	24,000		
	ಕಾಕನಕೋಟೆ ..	ಡಿಟೋ	10,000	95	50
	ಮೇಟಿಕುಪ್ಪೆ ..	ಡಿಟೋ	3,000	..	..
ಹುಣಸೂರು ..	ವೀರನಹೊಸಹಳ್ಳಿ ..	ಡಿಟೋ	ವಣ ಮತ್ತು ಹಕೀ ಪೋಖ್ತಾ		
	ಆನೇಚೌಕೂರು ..	ಡಿಟೋ			
	ದೊಡ್ಡಹರವೆ ..	ಡಿಟೋ	1,000		..
	ಕಚಕೊನಹಳ್ಳಿ ..	ಡಿಟೋ			
	ಮಾವಕಲ್ಲು ..	ಡಿಟೋ			
ಚಾಮರಾಜನಗರ ..	ಚಾಮರಾಜನಗರ ..	ಡಿಟೋ			
ಗುಂಡ್ಲು ..	ಭಂಡೀಪುರ ..				
ಡಿಟೋ ..	ಡಿಟೋ ..	ಗುಂಡ್ಲು ಡಿಪೋ ..	750	75	25
	ಬೇರಂಬಾಡಿ ..	ಡಿಟೋ ..	750	125	25
ಹೆಗ್ಗಡದೇವನಕೋಟೆ	ಬೇಗೂರು ..	ಬೇಗೂರು ..	1,000	300	..
	ಐನೂರು ಮಾರಿಗುಡಿ ..	ಸರಗೂರು ..	1,000	150	50
	ಕಾಕನಕೋಟೆ ...	ಮಂಜೇಗೌಡನಹಳ್ಳಿ ಮೈಸೂರು ವುಡ್ಯಾರ್ಡಿಗೆ ಸದರೀ ಜಂಗಲಿನಿಂದ ಅಪೇಕ್ಷಿಸಲ್ಪಡುವ ವಿಸಿಷ್ಟ ಮೊತ್ತವನ್ನಾಗಲಿ ಅಥವಾ ಕೆಲವು ಭಾಗವನ್ನಾಗಲಿ ಈ ಸ್ಥಳಕ್ಕೆ ಸಾಗಿಸಲ್ಪಡಬೇಕಾಗುತ್ತೆ.			
	ಮೇಟಿಕುಪ್ಪೆ ..	ಮಂಜಗವುಡನಹಳ್ಳಿ ..	ಡಿಟೋ	ಡಿಟೋ	ಡಿಟೋ
	ಕಾಕನಕೋಟೆ ...	ಅಂತರ ಸಂತೆ ..	1,000	150	25
	ಮೇಟಿಕುಪ್ಪೆ ..	ಡಿಟೋ ..	1,000	100	25
	ಕಾಕನಕೋಟೆ ..	ಮಾಸ್ತಿಗುಡಿ ಅಥವಾ ಕಾಕನಕೋಟೆ ಮೈಸೂರು ವುಡ್ಯಾರ್ಡಿಗೆ ಸದರೀ ಜಂಗಲಿನಿಂದ ಅಪೇಕ್ಷಿಸಲ್ಪಡುವ ವಿಸಿಷ್ಟ ಮೊತ್ತವನ್ನಾಗಲಿ ಅಥವಾ ಕೆಲವು ಭಾಗವನ್ನಾಗಲಿ ಈ ಸ್ಥಳಕ್ಕೆ ಸಾಗಿಸಲ್ಪಡಬೇಕಾಗುತ್ತೆ.			
ಹುಣಸೂರು ..	ವೀರನಹೊಸಹಳ್ಳಿ ..	ಹುಣಸೂರು ..	1,000	130	50
	ಆನೇಚೌಕೂರು ..				
	ದೊಡ್ಡಹರವೆ ..				
	ಕಚಕೊನಹಳ್ಳಿ ..	ಡಿಟೋ ..	1,500	175	100
	ಮಾವಕಲ್ಲು ..				
ಚಾಮರಾಜನಗರ ..	ಚಾಮರಾಜನಗರ ..	ಚಾಮರಾಜನಗರ ...	2,000	200	100
ಡಿಟೋ ..	ಡಿಟೋ ..	ನಂಜನಗೂಡು ..	1,000	50	50
ಗುಂಡ್ಲು ..	ಬೇರಂಬಾಡಿ ..	ಡಿಟೋ ..	2,000	50	..
ಹೆಗ್ಗಡದೇವನಕೋಟೆ.	ಐನೂರು ಮಾರಿಗುಡಿ ..	ಡಿಟೋ ..	2,000	150	..

ಫಾಸಲೆ ವಿವರ.

ತಾಲ್ಲೂಕು.	ಫಾರೆಸ್ಟ್.	ಮೊರ್ಗ.		ಡಿಪೋ ಹೆಸರು.
		ಸುಮಾರು ಜಂಗಲ್ ಮೈಲಿ.	ಸುಮಾರು ಹೈರೋಡ್ ಮೈಲಿ.	
ಗುಂಡ್ಲು ..	ಭಂಡೀಪುರ ..	2ರ ಲಾ|| 8	48ರ ಲಾ. 52	ಮೈಸೂರು ವುಡ್ಯಾರ್ಡ್
	ಡಿಟೋ ..	1ರ ಲಾ|| 8	12ರ ಲಾ. 16	ಗುಂಡ್ಲು ಪೇಟೆ ಡಿಪೋ
	ಬೇರಂಬಾಡಿ ..	2ರ ಲಾ|| 8	48ರ ಲಾ. 58	ಮೈಸೂರು ವುಡ್ಯಾರ್ಡ್
	ಡಿಟೋ ..	1ರ ಲಾ. 8	12ರ ಲಾ. 22	ಗುಂಡ್ಲು ಪೇಟೆ ಡಿಪೋ
ಹೆಗ್ಗಡದೇವನಕೋಟೆ.	ಬೇಗೂರು ..	10ರ ಲಾ|| 16	38	ಮೈಸೂರು ವುಡ್ಯಾರ್ಡ್
	ಡಿಟೋ ..	4ರ ಲಾ|| 10		ಬೇಗೂರು ಡಿಪೋ
	ಐನೂರು ಮಾರಿಗುಡಿ	28	41	ಮೈಸೂರು ವುಡ್ಯಾರ್ಡ್
	ಡಿಟೋ ..	20ರ ಲಾ|| 28		ನರಗೂರು ಡಿಪೋ
	ಕಾಕನಕೋಟೆ .	1ರ ಲಾ|| 16	35ರ ಲಾ. 56	ಮೈಸೂರು ವುಡ್ಯಾರ್ಡ್
	ಡಿಟೋ .	ಡಿಟೋ	5—20	ಮಂಜಿಗವುಡನಹಳ್ಳಿ
	ಡಿಟೋ ..	ಡಿಟೋ	7—22	ಅಂತರಸಂತೇ ಡಿಪೋ
	ಡಿಟೋ ..	1ರ ಲಾ. 10	1—10	ಮಾಸ್ತಿಗುಡಿ ಅಥವಾ ಕಾಕನಕೋಟೆ
	ಮೇಟಿಕುಪ್ಪೆ .	10ರ ಲಾ. 16	36	ಮೈಸೂರು ವುಡ್ಯಾರ್ಡ್
	ಡಿಟೋ .	5	2½	ಮಂಜಿಗವುಡನಹಳ್ಳಿ
	ಡಿಟೋ ..	ಡಿಟೋ	1	ಅಂತರಸಂತೇ ಡಿಪೋ
ಹುಣಸೂರು ..	ವೀರನಹೊಸಹಳ್ಳಿ	12½	38½	ಮೈಸೂರು ವುಡ್ಯಾರ್ಡ್
	ಡಿಟೋ ..	ಡಿಟೋ	5½	ಹುಣಸೂರು ಡಿಪೋ
	ಆನೇಚೌಕೂರು ..	3	44	ಮೈಸೂರು ವುಡ್ಯಾರ್ಡ್
	ಡಿಟೋ ..	ಡಿಟೋ	16	ಹುಣಸೂರು ಡಿಪೋ
	ದೊಡ್ಡಹರವೆ ..	7	47	ಮೈಸೂರು ವುಡ್ಯಾರ್ಡ್
	ಡಿಟೋ ..	10	19	ಹುಣಸೂರ್ ಡಿಪೊ ಹನಗೋಡಿಮಾರ್ಗವಾಗಿ
	ಕಚಕೂನಹಳ್ಳಿ .	7	37	ಮೈಸೂರು ವುಡ್ಯಾರ್ಡ್
	ಡಿಟೋ ..	7	9	ಹುಣಸೂರು ಡಿಪೋ
	ಮಾವಳ್ಳಿ ..	5	44	ಮೈಸೂರು ವುಡ್ಯಾರ್ಡ್
	ಡಿಟೋ ..	ಡಿಟೋ	16	ಹುಣಸೂರು ಡಿಪೋ
ಚಾಮರಾಜನಗರ ..	ಚಾಮರಾಜನಗರ ..	4ರ ಲಾ. 16	36ರ ಲಾ. 56	ಮೈಸೂರು ವುಡ್ಯಾರ್ಡ್
	ಡಿಟೋ ..	1ರ ಲಾ. 16	20	ಚಾಮರಾಜನಗರ ಡಿಪೋ

2. ತಮಾಂ ದರಖಾಸ್ತುಗಳೂ "ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸಾಟೂ ವಗೈರೆಗಳನ್ನು ಫಾರೆಸ್ಟ್‌ಗಳಿಂದ ಡಿಪೋಗಳಿಗೆ ಸಾಗಿಸುವದಕ್ಕೆ ಮಾತ್ರವೇ ದರಖಾಸ್ತು" ಯಂಬದಾಗಿ ಮೇಲ್‌ವಿಳಾಸ ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು, ದರಖಾಸು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಬಂದು ಫಾರೆಸ್ಟ್‌ಗೂ 100 ರೂಪಾಯಿಗಳ ಬೆಲೆಯುಳ್ಳ ಕರೆನ್ಸೀ ನೋಟುಗಲಿ ಯಾ ಪ್ರೋನೋಟುಗಲಿ ರವಾನಿಸಬೇಕು. ದರಖಾಸ್ತುಗಳ ಅಜವಾಯಿಸಿಯಿಂದ ಮೇಲ್ಕಂಡ ಕರೆನ್ಸೀ ನೋಟುಗಳನ್ನು ವಾಪಸ್ ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರರವರಿಂದ 1896ನೇ ಇಸವಿ ಆಗಸ್ಟ್ 31ನೇ ತಾರೀಖಿನ ವರೆವಿಗೆ ಅಂಗೀಕರಿಸಲ್ಪಡುವವು.

4. ದರಖಾಸ್ತು ಮಾಡಲು ಯಿಚ್ಛೈಯುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ಬಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ ತಯಾರಾದದ್ದನ್ನ ಸಾಗಿಸುವದಕ್ಕೆ ಮಾತ್ರ ದರಖಾಸ್ತು ಮಾಡಿದ ಪಕ್ಷದಲ್ಲಿ ಅವನು ಸಾಟೂ ವಗೈರೆಯನ್ನ ಪ್ರತಿ ಬಂದು ಫಾರೆಸ್ಟಿನಿಂದಲೂ ಡಿಪೋಗಳಿಗೆ ತಯಾರಾದದ್ದನ್ನ ಸಾಗಿಸುವದಕ್ಕೆ ಮಾತ್ರ ಒಪ್ಪಿಕೊಳ್ಳುವ ಕಮ್ಮಿದರವನ್ನು ಬೇರೆಬೇರೆಯಾಗಿ ನಮೂದಿಸತಕ್ಕದ್ದು. ಫಾರೀನಾಟುಗಳಿಗೆ ದರ ಸಲೆ ಅಡಿ 1ಕ್ಕೆ ಯಿಷ್ಟು ಚಿಲ್ಲರೇ ಚೌಬೀನೆಗಳಿಗೆ ದರ ಗಾಡೀ 1ಕ್ಕೆ ಯಿಷ್ಟೆಂದು ದರ ನಮೂದಿಸಬೇಕು. ಫಾರೀನಾಟುಗಳಿಗೆ ದರ ಸಲೆ ಅಡಿ 1ಕ್ಕೆ ಯಿಷ್ಟು ಚಿಲ್ಲರೇ ಚೌಬೀನೆಗಳಿಗೆ ದರ ಗಾಡೀ 1ಕ್ಕೆ ಯಿಷ್ಟೆಂದು ದರ ನಮೂದಿಸಬೇಕು.

ಪರಾ.—ದರ ಗಾಡೀ ಜೋಜಾ ಅಂದರೆ—

ಚಿಲ್ಲರೇ ಚೌಬೀನೆ ಗಾಡಿ 1ಕ್ಕೆ		5 ಸಲೆ ಅಡಿ
ಹೆಬ್ಬಿದರು ..		50 ಅದದು
ಮೇದರ ಗಳು ..		150 ಡಿಟೋ
ಕಿರೀಬಿದರು ..		200 ಡಿಟೋ
ಚಾಮರಾಜನಗರದ ಡಿಪೋದಲ್ಲಿ ಮಾತ್ರ ಕಿರೀಬಿದರು ಗಾಡಿ 1ಕ್ಕೆ		400

5. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಮೈಸೂರು ವುಡ್ಯಾರ್ಡಿಗೆ ಅಥವಾ ಕಛಿಲಾನದಿಯ ಥಡಗಳ (ಮೇಲೆ ಗುರ್ತು ಮಾಡಲ್ಪಟ್ಟ) ತೆಪ್ಪದ ಕಡುವಿಗೆ ಜಂಗಲಿನಿಂದ ಸಾಗಿಸಲು ಉದ್ದೇಸಿಸುವ ತಮ್ಮಾ ಚದರ ನಾಟುಗಳನ್ನೂ ತಯಾರೀ ತಾರೀಖು ಲಾಗಾಯತು 40 ದಿವಸಗಳ ವಳಗಾಗಿ ಮೇಲ್ಕಂಡ ಸ್ಥಳಗಳಿಗೆ ಸಾಗಿಸುವ ಬಗ್ಗೆ ಬದ್ಧನಾಗಿರತಕ್ಕದ್ದು. ಮೈಸೂರು ವುಡ್ಯಾರ್ಡಿಗೆ ಅಲ್ಲದೆ ಇತರ ಡಿಪೋಗಳಿಗೆ ರವಾನೇ ಬಗ್ಗೆ ತಯಾರಾಗುವ ಚಿಲ್ಲರ ಚಾಜೀನೆ ಮತ್ತು ಬೋಬುಗಳು ಸಹ ತಯಾರೀ ತಾರೀಖು ಲಾಗಾಯತು 20 ದಿವಸಗಳ ವಳಗೆ ಆಯಾ ಡಿಪೋಗಳಿಗೆ ರವಾನಿಸಲ್ಪಡತಕ್ಕದ್ದು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರೆದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಜಾಮೀನು ತರೀಕ್ ಫಾರೆಸ್ಟ್ ವಂದಕ್ಕೆ 200 ರೂಪಾಯಿ ಪ್ರಕಾರ ಡಿಪಾಜಿಟ್ ಕಟ್ಟತಕ್ಕದ್ದು. ಮೇಲ್ಕಂಡ ಷರತ್ತುಗಳ ಮೇರೆ ನಡೆಯಲು ತಪ್ಪಿದಲ್ಲಿ ಶೇವಣೀ ಮೊಬಲಗನ್ನು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದು.

7. ಬ್ಯಾಸಿಗೇ ಕಾಲದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾರ್ನೂಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಕಮ್ಮಿದರದ ಅಥವಾ ಇತರ ಯಾವ ದರಖಾಸ್ತುಗಳನ್ನೂ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡೀ ರಸ್ತೆ ವಗೈರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ಉದ್ದೇಸಿಸುವ ಕಂಟ್ರಾಕ್ಟುದಾರನೇ ಆತನ ಹಾತ ಲಾಗವಡಿನಿಂದ ತಕ್ಕ ಏರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೇ ಇರುವ ಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರೆವು.

10. ಉದ್ದೇಸಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಮೈಸೂರ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 12ನೇ ಜುಲೈ 1896.

1. ಕಂದಾಯದ ಬಾಕಿದಾರರಾದ ಮೈಸೂರು ವಗೈರೆ ಗ್ರಾಮದ ಕೊಮಾರ ತಿರನಾರಣಯ್ಯಂಗಾರ್ ವಗೈರೇರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸರಕಾರಕ್ಕೆ ಶೇರಿಸಿಕೊಳ್ಳಲ್ಪಟ್ಟ ಸ್ಥಿರಸ್ವತ್ತು ಮೈಸೂರ್ ಡಿಸ್ಟ್ರಿಕ್ಟ್ ಯಡತೊರೆ ತಾಲ್ಲೂಕು ಸರ್ವ ಮಾನ್ಯ ಹಳೆಯೂರು, ಹೊಸೂರು ಗ್ರಾಮದಲ್ಲಿ 1896ನೇ ಸೆಪ್ಟಂಬರ್ 5ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಡೆಪ್ಯೂಟಿ ಕಮ್ಮಿಷರ್ ಸಾಹೆಬರವರು ಅಥವಾ ಅಸಿಸ್ಟೆಂಟ್ ಕಮ್ಮಿಷರ್ ಸಾಹೆಬರವರಿಂದ ಆ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ಸಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1896ನೇ ಸಾಲಿಗೆ ಪೂರ್ತಿಯಾಗಿ * ಮನ್ಮಥ ಸಂವತ್ಸರಕ್ಕೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 393—15—8 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಭಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳದು ಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದ ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಪ್ರತಿನಿಧೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜ್ ನಿಲ್ಲಿಸಲ್ಪಡುತ್ತೆ.

7. ಹರಾಜ್ ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜ್‌ದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು, ಮತ್ತು ಸದರೀ